# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ  568/2018

**ಚಾಸಾ ಃ- 02 / ಪ್ರಾಸಾ ಃ- 02**

| | |
|---|---|
| ಹೆಸರು | ಸಿದ್ದರಾಜು |
| ತಂದೆ ಹೆಸರು | ತಿಮ್ಮಯ್ಯ ಕೆ |
| ವಯಸ್ಸು | 40 |
| ಉದ್ಯೋಗ | ಉಪ ವಲಯ ಅರಣ್ಯ ಅಧಿಕಾರಿ, ಬೆಂಗಳೂರು ವಿಜಿಲೆನ್ಸ್ |
| ವಿಳಾಸ | ಬೆಂಗಳೂರು |

**ದಿನಾಂಕಃ 21.06.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ದಿನಾಂಕ 15, ಜುಲೈ 2014 ರಿಂದ ದಿನಾಂಕ 17 -11-2018 ರವರಗೆ ನೆಲಮಂಗಲ ವಲಯದಲ್ಲಿ ಉಪ ವಲಯ ಅರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13.12.2014 ರಂದು ಭನ್ನೇರುಘಟ್ಟ ಕಡೆಯಿಂದ ಸಾವನದುರ್ಗ ಅರಣ್ಯ ವಲಯಕ್ಕೆ ಅದರಂಗಿ ನಾರ್ಥ್ ಫಾರೆಸ್ಟ್ ಗೆ ಆನೆಗಳು ಬಂದಿದ್ದವು. ಆನೆಗಳನ್ನು ಸಾವನದುರ್ಗ ಅರಣ್ಯ ಪ್ರದೇಶಕ್ಕೆ ಡ್ರೈವ್ ಮಾಡುತ್ತಾ ಬಂದಿರುತ್ತೇವೆ. ನಂತರ ಸದರಿ ಡ್ರೈವ್ ?ಅನ್ನು ಮುಗಿಸಿ ವಾಪಸ್ಸು ಬೆಳಿಗ್ಗೆ 6.00 ಗಂಟೆಗೆ ಬರುತ್ತಿರುವಾಗ ಎದುರುಗಡೆಯಿಂದ ಒಂದು ಓಮ್ನಿ ಗಾಡಿ ನಂ. ಕೆಎ 04-ಎಂಡಿ-6137 ವಾಹನವು ಬಂದಿದ್ದು ಆಗ ನಾವು ಅರಣ್ಯ ಪ್ರದೇಶದಲ್ಲಿ ವಾಹನ ಬರುತ್ತಿದೆ ಎಂದು ಸದರಿ ವಾಹನವನ್ನು ತಡೆದು ನಿಲ್ಲಿಸಿರುತ್ತೇವೆ. ಸದರಿ ವಾಹನವನ್ನು ತಡೆದು ಪರಿಶೀಲಿಸಲು ಮುಂದಾದಾಗ ಸದರಿ ವಾಹನದಿಂದ ಒಬ್ಬ

ವ್ಯಕ್ತಿಯು ಇಳಿದು ಓಡಿಹೋಗಿರುತ್ತಾರೆ. ನಂತರ ನಾವುಗಳು ವಾಹನವನ್ನು ಸುತ್ತುವರೆದು ಪರಿಶೀಲಿಸಲಾಗಿ ಸದರಿ ವಾಹನದಲ್ಲಿ ವಹೀದ್ ಉಲ್ಲಾಖಾನ್ ಎಂಬ ವ್ಯಕ್ತಿ ಇದ್ದನು. ನಂತರ ನಾನು ಹಾಗೂ ನಮ್ಮ ಸಿಬ್ಬಂದಿಗಳು ಸದರಿ ವಾಹನದ ಹಿಂದಿನ ಡಿಕ್ಕಿಯನ್ನು ತೆಗೆದು ನೋಡಲಾಗಿ ಅಲ್ಲಿ ಒಂದು ನವಿಲನ್ನು ಸಾಯಿಸಿ ಇಟ್ಟಿದ್ದರು. ಹಾಗೂ ಸದರಿ ವಾಹನದ ಮುಂಭಾಗದ ಸೀಟಿನಲ್ಲಿ ಒಂದು ಡಬಲ್ ಬ್ಯಾನರ್ ಗನ್ ಹಾಗೂ ಇನ್ನೊಂದು ಗೋಲ್ಡನ್ ಹ್ಯಾಂಕ್ಲರ್ ಎಂಬ ಬಂದೂಕು ಇದ್ದಿತು. ನಂತರ ಎಲ್ಲಾ ತಪಾಸಣೆ ಮಾಡಿದಾಗ 0.22 ಇಂಚಿನ ಬುಲೆಟ್ ಇತ್ತು. ನಂತರ ಸದರಿ 1 ನೇ ಆರೋಪಿಗೆ ಏಕೆ ನವಿಲನ್ನು ಸಾಯಿಸಿದ್ದೀರಿ ಎಂದು ಕೇಳಲಾಗಿ ಆತನು ನಮ್ಮ ಹಳ್ಳಿಯ ಬಳಿ ನವಿಲನ್ನು ಹಿಡಿದು ಬ್ಲೇಡ್ ?ನಿಂದ ನವಿಲಿನ ಕುತ್ತಿಗೆಯನ್ನು ಕೂಯ್ದಿರುತ್ತೇ಼ನೆ ಎಂದು ಹೇಳಿರುತ್ತಾನೆ. ನಂತರ ನಾವು ಸ್ಥಳದಲ್ಲಿಯೇ ಬೆಳಿಗ್ಗ 6.00 ರಿಂದ 7.30 ಗಂಟೆ ವರೆಗೆ ಸ್ಥಳ ಮಹಜರನ್ನು ಜರುಗಿಸಿರುತ್ತೇವೆ. ನಂತರ ನಾವುಗಳು 1 ನೇ ಆರೋಪಿಯನ್ನು , ಸದರಿ ಓಮ್ನಿ ವಾಹನವನ್ನು ಹಾಗೂ ನವಿಲನ್ನು ಜಪ್ತಿ ಪಡಿಸಿಕೊಂಡು ನಮ್ಮ ವಲಯ ಅರಣ್ಯ ಕಛೇರಿಗೆ ತೆಗೆದುಕೊಂಡು ಬಂದಿರುತ್ತೇವೆ. ನಂತರ ಸದರಿ ವಹೀದ್ಉಲ್ಲಾಖಾನ್ ರವರಿಗೆ ಓಡಿಹೋದ ವ್ಯಕ್ತಿ ಯಾರು ಎಂದು ಕೇಳಲಾಗಿ ಆತನು ಓಡಿಹೋದ ವ್ಯಕ್ತಿಯ ಹೆಸರು ರೆಹಮತ್ ಬಿನ್ ಲೇಟ್ ಕಲೀಲ್ ಉಲ್ಲಾ ಖಾನ್ ಎಂದು ತಿಳಿಸಿದನು. ನಂತರ ದಸ್ತಗಿರಿ ನಿಯಮಗಳನ್ನು ಪಾಲಿಸಿ 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇವೆ.

ಈಗ ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ವಾಹನ ಹಾಗೂ ಬಂಧೂಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ನಿ ಪಿ-4 ಮತ್ತು 5 ಅನ್ನು ತೋರಿಸಲಾಗಿ ಸದರಿ ಬಂಧೂಕು ಹಾಗೂ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 15.12.2014 ರಂದು ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆದು ಸದರಿ ನವಿಲಿನ ಅಂತ್ಯ ಸಂಸ್ಕಾರವನ್ನು ಸಂಜೆ 6.30 ರಿಂದ 8.00 ಗಂಟೆಯವರೆಗೆ ಮಾಡಿರುತ್ತೇವೆ. ಈಗ ಸಾಕ್ಷಿಗೆ ನಿಪಿ-8 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-6 ಮತ್ತು 7 ಅನ್ನು ತೋರಿಸಲಾಗಿ ಸದರಿ ನವಿಲಿನ ಅಂತ್ಯ ಸಂಸ್ಕಾರದ ಪೋಟೋಗಳನ್ನು ನೊಡೀ ಗುರುತಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಈ ಹಂತದಲ್ಲಿ ಆರೋಪಿಯ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು ಃ-**

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಶ ಕೋರಿದ್ದು ಸೂಕ್ತ ಕಾರಣ ಇಲ್ಲದ ಕಾರಣ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 568/2018**

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ವನಿತ ಆರ್ |
| ಗಂಡನ ಹೆಸರು | ನರೇಂದ್ರ ಕುಮಾರ್ |
| ವಯಸ್ಸು | 54 |
| ಉದ್ಯೋಗ | ಡಿಸಿಎಫ್ , (ಸಾಮಾಜಿಕ ಅರಣ್ಯ ವಿಭಾಗ) ಬಿಜಾಪುರ ವಲಯ |
| ವಿಳಾಸ | ಬಿಜಾಪುರ |

**ದಿನಾಂಕಃ 21.06.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 10.10.2013 ರಿಂದ ಜುಲೈ 2016 ರವರಗೆ ನೆಲಮಂಗಲ ವಲಯದಲ್ಲಿ ವಲಯ ಅರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13.12.2014 ರಂದು ಭನ್ನೇರುಘಟ್ಟ ಕಡೆಯಿಂದ ಸಾವನದುರ್ಗ ಅರಣ್ಯ ವಲಯಕ್ಕೆ ಅದರಂಗಿ ನಾರ್ಥ್ ಫಾರೆಸ್ಟ್ ಗೆ ಆನೆಗಳು ಬಂದಿದ್ದವು. ಆನೆಗಳನ್ನು ಸಾವನದುರ್ಗ ಅರಣ್ಯ ಪ್ರದೇಶಕ್ಕೆ ಡ್ರೈವ್ ಮಾಡುತ್ತಾ ಬಂದಿರುತ್ತೇವೆ. ನಂತರ ಸದರಿ ಡ್ರೈವ್ ?ಅನ್ನು ಮುಗಿಸಿ ವಾಪಸ್ಸು ಬೆಳಿಗ್ಗೆ 6.00 ಗಂಟೆಗೆ ಬರುತ್ತಿರುವಾಗ ಎದುರುಗಡೆಯಿಂದ ಒಂದು ಓಮ್ನಿ ಗಾಡಿ ಕೆಎ 04-ಎಂಡಿ-6137 ವಾಹನವು ಬಂದಿದ್ದು ಆಗ ನಾವು ಅರಣ್ಯ ಪ್ರದೇಶದಲ್ಲಿ ವಾಹನ ಬರುತ್ತಿದೆ ಎಂದು ಸದರಿ ವಾಹನವನ್ನು ತಡೆದು ನಿಲ್ಲಿಸಿರುತ್ತೇವೆ. ನಂತರ ನಾನು ಹಾಗೂ ನಮ್ಮ ಸಿಬ್ಬಂದಿಗಳು ಸದರಿ ವಾಹನದ ಹಿಂದಿನ ಡಿಕ್ಕಿಯನ್ನು ತೆಗೆದು ನೋಡಲಾಗಿ ಅಲ್ಲಿ ಒಂದು ನವಿಲನ್ನು ಸಾಯಿಸಿ ಇಟ್ಟಿದ್ದರು.

ಹಾಗೂ ಸದರಿ ವಾಹನದ ಮುಂಭಾಗದ ಸೀಟಿನಲ್ಲಿ ಒಂದು ಡಬಲ್ ಬ್ಯಾನರ್ ಗನ್ ಹಾಗೂ ಇನ್ನೊಂದು ಗೋಲ್ಡನ್ ಆಂಟ್ಲರ್ ಎಂಬ ಬಂದೂಕು ಇದ್ದಿತು. ನಂತರ ಎಲ್ಲಾ ತಪಾಸಣೆ ಮಾಡಿದಾಗ 0.22 ಇಂಚಿನ ಬುಲೆಟ್ ಇತ್ತು. ಸದರಿ ವಾಹನದ ಮುಂಭಾಗದಲ್ಲಿ ಇಬ್ಬರು ವ್ಯಕ್ತಿಗಳು ಕೂತಿದ್ದರು , ಸದರಿಯವರಲ್ಲಿ ಒಬ್ಬ ಓಡಿಹೋಗಿರುತ್ತಾರೆ ಹಾಗೂ ವಹೀದ್ ಉಲ್ಲಾ ಖಾನ್ ಎಂಬುವವರನ್ನು ದಸ್ತಗಿರಿ ಮಾಡಿರುತ್ತೇವೆ. ನಂತರ ಸದರಿ ವಹೀದ್‌ಉಲ್ಲಾ ಖಾನ್ ರವರಿಗೆ ಓಡಿಹೋದ ವ್ಯಕ್ತಿ ಯಾರು ಎಂದು ಕೇಳಲಾಗಿ ಆತನು ಓಡಿಹೋದ ವ್ಯಕ್ತಿಯ ಹೆಸರು ರೆಹಮತ್ ಬಿನ್ ಲೇಟ್ ಕಲೀಲ್ ಉಲ್ಲಾ ಖಾನ್ ಎಂದು ತಿಳಿಸಿದನು. ನಂತರ ಸದರಿ 1 ನೇ ಆರೋಪಿಯು ಏಕೆ ನವಿಲನ್ನು ಸಾಯಿಸಿದ್ದೀರಿ ಎಂದು ಕೇಳಲಾಗಿ ಆತನು ನನ್ನ ತಾಯಿಗೆ ತುಂಬಾ ವರ್ಷಗಳಿಂದ Arthritis ಖಾಯಿಲೆ ಇದೆ ಹಾಗಾಗಿ ಅವರ ನೋವು ನನಗೆ ನೋಡಲು ಆಗಿರುವುದಿಲ್ಲ, ಒಬ್ಬ ಪೂಜಾರಿಯವರು ನವಿಲಿನ ಚರ್ಮದ ಎಣ್ಣೆಯನ್ನು ಹಚ್ಚಿದರೆ ಕಡಿಮೆ ಆಗುತ್ತದೆ ಎಂದು ತಿಳಿಸಿದ್ದರು. ಆ ಕಾರಣದಿಂದ ನವಿಲನ್ನು ಸಾಯಿಸಿರುತ್ತೇನೆ ಎಂದು ಒಪ್ಪಿಕೊಂಡಿರುತ್ತಾರೆ. ನಂತರ ನಾವು ಸ್ಥಳದಲ್ಲಿಯೇ ಬೆಳಿಗ್ಗ 6.00 ರಿಂದ 7.30 ಗಂಟೆ ವರೆಗೆ ಸ್ಥಳ ಮಹಜರನ್ನು ಜರುಗಿಸಿರುತ್ತೇನೆ. ಸದರಿ ಮಹಜರನ್ನು ನಮ್ಮ ಬೀಟ್ ಅರಣ್ಯ ರಕ್ಷಕ ಹರೀಶ್ ಆರ್ (ಚಾಸಾ-3) ರವರು ಬರೆದಿರುತ್ತಾರೆ. ಸದರಿ ಮಹಜರ್ ಗೆ ನಾನು, ಚಾಸಾ-2 , ಚಾಸಾ-4 ಮತ್ತು ಚಾಸಾ-5 ರವರು ಸಹಿ ಮಾಡಿರುತ್ತೇವೆ. ನಂತರ ನಾನು ಹಾಗೂ ನಮ್ಮ ಸಿಬ್ಬಂದಿಗಳು 1 ನೇ ಆರೋಪಿಯನ್ನು , ಸದರಿ ಓಮ್ನಿ ವಾಹನವನ್ನು ಹಾಗೂ ನವಿಲನ್ನು ನಮ್ಮ ವಲಯ ಅರಣ್ಯ ಕಛೇರಿಗೆ ತೆಗೆದುಕೊಂಡು ಬಂದಿರುತ್ತೇವೆ. ನಂತರ 1 ನೇ ಆರೋಪಿಗೆ ನೀನು ಏಕೆ ನವಿಲನ್ನು ಸಾಯಿಸಿರುತ್ತೀಯಾ ಎಂದು ಹೇಳಿಕೆ ಬರೆದುಕೊಡಲು ಕೇಳಿದ್ದು ಆರೋಪಿಯು ಅದರಂತೆ ಇಂಗ್ಲೀಷ್ ಭಾಷೆಯಲ್ಲಿ ಹೇಳಿಕೆ ಬರೆದುಕೊಟ್ಟಿರತ್ತಾರೆ. ನಂತರ ದಸ್ತಗಿರಿ ನಿಯಮಗಳನ್ನು ಪಾಲಿಸಿ 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇವೆ. ಸದರಿ ನವಿಲನ್ನು

ಪಶುವೈದ್ಯಾಧಿಕಾರಿಯವರಿಗೆ ಶವಪರೀಕ್ಷೆಗಾಗಿ ಕೊಟ್ಟಿದ್ದೆವು. ಅದರಂತೆ ಸದರಿ ಪಶುವೈದ್ಯಾಧಿಕಾರಿಗಳು Animal throat Jugular lavein carotid artery was slit by knife, leaves cut desert wound loss of blood and Jugular lavein sharp object this halal method ಎಂದು ವರಧಿಯನ್ನು ಕೊಟಿಟರುತ್ತಾರೆ. ನಂತರ ಸದರಿ ಬಂಧೂಕುಗಳನ್ನು ಹಾಗೂ ಓಮ್ನಿ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ. ಚಾಸಾ-2 ರವರು ಸದರಿ ನವಿಲನ್ನು Destroy ಮಾಡಲು ಮಾನ್ಯ ನ್ಯಾಯಾಲಯಕ್ಕೆ ಅನುಮತಿಯನ್ನು ಕೋರಿ ಮನವಿಯನ್ನು ಸಲ್ಲಿಸಿದ್ದರು ಅದರಂತೆ ಮಾನ್ಯ ನ್ಯಾಯಾಲಯದಿಂದ ದಿನಾಂಕ 15.12.2014 ರಂದು ಆದೇಶ ಆಗಿದ್ದು ಸದರಿ ಆದೇಶದ ಮೇರೆಗೆ ಅದೇ ದಿನಾಂಕದಂದು ನಾವು ನವಿಲನ್ನು ನಮ್ಮ ಕಛೇರಿಯ ಆವರಣದಲ್ಲೆ Destroy ಮಾಡಿರುತ್ತೇವೆ.

ದಿನಾಂಕ 02.11.2017 ರಂದು ಈ ಪ್ರಕರಣದ ಸಂಬಂಧ ಎಸಿಎಫ್ ? ರವರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಈಗ ಸಾಕ್ಷಿಗೆ ದಿನಾಂಕ 14.12.2014 ರಂದು ಬೆಳಿಗ್ಗೆ 6.00 ರಿಂದ 7.30 ಗಂಟೆಯವರೆಗೆ ಸ್ಥಳದಲ್ಲಿ ಜರುಗಿಸಿದ ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಆರೋಪಿಯು ನೀಡಿದ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ವಾಹನವನ್ನು ಹಾಗೂ ಬಂಧೂಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ

ಬಂದೂಕುಗಳನ್ನು ಹಾಗೂ ವಾಹನವನ್ನು ನೋಡಿ ಗುರುತಿಸಿದ್ದು ಪೋಟೋಗಳನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸದರಿ ನವಿಲನ್ನು destroy ಮಾಡಿದ ಬಗ್ಗೆ ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸದರಿ ನವಿಲನ್ನು ಅಂತ್ಯ ಸಂಸ್ಕಾರ ಮಾಡಿದ ಬಗ್ಗೆ ಮಹಜರನ್ನು ತೋರಿಸಲಾಗಿ ಸದರಿ ಮಹಜರಿ ನಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಮಹಜರನ್ನು ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಸಂಜೆ 6.30 ಕ್ಕೆ ಪ್ರಾರಂಭಿಸಿ 8.00 ಗಂಟೆಗೆ ಮುಕ್ತಾಯಗೊಳಿಸಿರುತ್ತೇವೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಈ ಹಂತದಲ್ಲಿ ಆರೋಪಿಯ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು :-**

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಶ ಕೋರಿದ್ದು ಸೂಕ್ತ ಕಾರಣ ಇಲ್ಲದ ಕಾರಣ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**